ಇ. ಮೇಲೆ (ಅ) ರಲ್ಲಿ ವಿವರಿಸಿದ ಕಾರಣಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬಸವಕಲ್ಯಾಣ ಮತಕ್ಷೇತ್ರದಲ್ಲಿರುವ ಆರೋಗ್ಯ ಘಟಕಗಳು

2579 (2953) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿರುವ ವಿವಿಧ ಯೋಜನೆಗಳ ಅಡಿಯಲ್ಲಿರುವ ಸಂಖ್ಯೆ ಎಷ್ಟು ;

ಆ) 2000-2001ನೇ ಆರ್ಥಿಕ ವರ್ಷದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ಸ್ಥಾಪಿಸಲಾಗುವುದು.

ಇ) ಬಸವಕಲ್ಯಾಣ ಮತಕ್ಷೇತ್ರದಲ್ಲಿರುವ ವಿವಿಧ ಘಟಕಗಳಲ್ಲಿರುವ ಹಾಗೂ ತಾಲ್ಲೂಕು ಕೇಂದ್ರದಲ್ಲಿರುವ ಮಂಜೂರಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು)

ಈ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು; ಯಾವಾಗ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಆರೋಗ್ಯ ಘಟಕಗಳ ಸಂಖ್ಯೆ 2 ಅವುಗಳು

1) ಹಾರ್‌ಕೋಡ್

2) ಘೋಟಾಳ

ಆ) ಇಲ್ಲ

ಇ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಬರುವ ಆರೋಗ್ಯ ಘಟಕ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಮಂಜೂರಾಗಿರುವ ಸಿಬ್ಬಂದಿಗಳ ವಿವರದ ಪಟ್ಟಿ ಲಗತ್ತಿಸಿದೆ.

ಈ) ಖಾಲಿ ಇರುವ ವೈದ್ಯರ ಸಂಖ್ಯೆ 18 ಈ ಖಾಲಿ ಹುದ್ದೆಗಳ ಪೈಕಿ ವೈದ್ಯರ ಹಾಗೂ ಅರೆ ವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ವಿಧಾನಸಭೆ ಪ್ರಶ್ನೆ ಸಂ. 2953 ಕ್ಕೆ

ಬಸವಕಲ್ಯಾಣ ಮತಕ್ಷೇತ್ರದಲ್ಲಿರುವ ವಿವಿಧ ಆರೋಗ್ಯ ಘಟಕಗಳಿಂದ ಹಾಗೂ ತಾಲ್ಲೂಕಾ ಆರೋಗ್ಯ ಕೇಂದ್ರದಲ್ಲಿರುವ ಮಂಜೂರಾಗಿರುವ ಸಿಬ್ಬಂದಿಗಳ ವಿವರಗಳ ಪಟ್ಟಿ

ಕ್ರಮ ಸಂಖ್ಯೆ	ಹುದ್ದೆ	ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣ			ಪ್ರಾ.ಆ. ಘಟಕ ಹಾರಕೂಡಿ			ಪ್ರಾ.ಆ.ಘಟಕ ಘೋಟಾಳಾ		
		ಮಂ.	ಹಾ	ಖಾ	ಮಂ.	ಹಾ	ಖಾ	ಮಂ.	ಹಾ	ಖಾ
1)	ವೈದ್ಯಾಧಿಕಾರಿಗಳು	6	5	1	1	-	1	1	1	-
2)	ಪ್ರ.ದ.ಸ	1	1	0	0	-	0	0	0	-
3)	ಕ. ಅಧೀಕ್ಷಕರು	1	1	0	1	-	1	1	1	-
4)	ಫಾರ್ಮಾಸಿಸ್ಟ್	2	1	1	1	-	1	1	1	-
5)	ದ್ವಿ.ದ.ಸ	4	3	1	1	-	1	1	1	-
6)	ಶುಶ್ರೂಷಕರು	10	3	7	0	-	0	0	0	-
7)	ಪ್ರ.ಶಾ. ತಂತ್ರಜ್ಞರು	3	3	0	0	0	0	0	0	-
8)	ಕ್ಷ.ಕಿರಣ ತಂತ್ರಜ್ಞರು	1	0	1	0	-	0	0	0	-
9)	ಹಿ.ಆ.ಸ (ಮಹಿಳಾ)	1	1	0	0	-	0	0	0	-
10)	ಕಿ.ಆ.ಸ (ಮಹಿಳಾ)	4	4	0	2	2	0	3	2	1
11)	" (ಪುರುಷ)	1	1	0	0	-	0	0	0	0
12)	ವಾಹನ ಚಾಲಕರು	1	1	0	0	-	0	0	0	0
13)	ಜೂ.ಎನ್.ಎಂ.ಎನ್	1	1	0	0	-	0	0	0	0
14)	ಗ್ರೂಪ್ 'ಡಿ'	24	24	0	3	0	3	3	3	0
15)	ದಂತ ವೈದ್ಯರು	1	0	1	0	0	0	0	0	0
16)	ತಾ.ಆ. ಅಧಿಕಾರಿಗಳು	1	0	1	0	0	0	0	0	0